ದೂರವಾಣಿ ಸಂಖ್ಯೆ: 0820-2564229
0820-2586561

# ಸಾಲಿಗ್ರಾಮ ಪಟ್ಟಣ ಪಂಚಾಯತ್ ಕಾರ್ಯಾಲಯ

ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ - 576 225

E-mail :ka.saligrama.tp@gmail.com Website:www.saligramatown.mrc.gov.in

ಪತ್ರ ಸಂ: ಸಾ.ಪ.ಪಂ/ಕಿ.ಆ.ನೀ/ಸಿಆರ್/828 /2025-26 ದಿನಾಂಕ: 19-09-2025

## -;ಕರ್ನಾಟಕ ಪುರಸಭಾ ಅಧಿನಿಯ 1964 ಪ್ರಕರಣ 262ರಂತೆ

## ಅಂತಿಮ ನೋಟೀಸು:-

ವಿಷಯ: ಅನಧಿಕೃತವಾಗಿ ನಡೆಸುತ್ತಿರುವ ಪ್ರಾಣಿ ಪಾರುಗಾಣಿಕಾ ಕೇಂದ್ರವನ್ನು ತೆರವುಗೊಳಿಸುವುದೊಂದಿಗೆ ಶಾಶ್ವತವಾಗಿ ನಿರ್ಭಂದಿಸುವ ಕುರಿತು.

ಉಲ್ಲೇಖ: 1)ಈ ಕಚೇರಿಯ ನೋಟೀಸು ಪತ್ರ ಸಂ :ಸಾ.ಪ.ಪಂ/ಎಚ್ ಐ/ಸಿಆರ್ /2024-25 ದಿ: 06-02-2025.

2) ಈ ಕಚೇರಿಯ ನೋಟೀಸು:2 ರ ಪತ್ರ ಸಂ: ಸಾ.ಪ.ಪಂ/ಕಿ.ಆ.ನೀ/ಸಿಆರ್/828 /2024-25/01-03-2025

3) ನಿಮ್ಮ ಅರ್ಜಿ ದಿನಾಂಕ: 10-03-2025ರಂತೆ

4) ಉಪ ನಿರ್ದೇಶಕರು (ಆಡಳಿತ),ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಉಡುಪಿ ಇವರ ಪತ್ರ ಸಂಖ್ಯೆ: ಸಂ:ಉನಿಉಸಿ-ಪ್ರಾ.ರ.ಕೇಂದ್ರ:2025-26 ದಿನಾಂಕ: 24-07-2025 ರಂತೆ

*******

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ವಾರ್ಡ ಸಂಖ್ಯೆ 7ರಲ್ಲಿ ದೇವಸ್ಥಾನ ಬೆಟ್ಟು ವ್ಯಾಪ್ತಿಯಲ್ಲಿ ನಿಮ್ಮ ಕ.ನಂ : 3-52 ರಲ್ಲಿ ಅನಧಿಕೃತವಾಗಿ ಪ್ರಾಣಿ ಪಾರುಗಾಣಿಕಾ ಕೇಂದ್ರವನ್ನು ನಡೆಸುತ್ತಿದ್ದು. ಈ ಸಂಬಂಧ ಹಲವಾರು ಬಾರಿ ಸಾರ್ವಜನಿಕರ ದೂರುಗಳು ಈ ಕಚೇರಿಗೆ ಸಲ್ಲಿಕೆಯಾಗಿರುತ್ತದೆ. ಹಾಗೂ ಸದ್ರಿ ವಿಷಯಕ್ಕೆ ಸಂಬಂಧಿಸಿದಂತೆ ಪಟ್ಟಣ ಪಂಚಾಯತ್ ಸಾಲಿಗ್ರಾಮ ದಿಂದ ದಿನಾಂಕ: 06-2-2025 ಮತ್ತು 01-03-2025ರಂದು ನೋಟೀಸು ಜಾರಿಗೊಳಿಸಿ ನೀವು ನಡೆಸುತ್ತಿರುವ ಪ್ರಾಣಿ ಪಾರುಗಾಣಿಕಾ ಕೇಂದ್ರವು ಸಂಬಂಧಪಟ್ಟ ಇಲಾಖೆಯಿಂದ ನೋಂದಾಣಿಯಾಗಿರುವುದಿಲ್ಲವೆಂದು ಹಾಗೂ ಪರವಾನಿಗೆ ಪಡೆದಿರುವುದಿಲ್ಲವೆಂದು ಮತ್ತು ಈ ಸಂಬಂಧ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ 1960 (PCA) ಉಲ್ಲಂಘನೆಯಾಗಿರುವುದಾಗಿ ಸೂಚಿಸಲಾಗಿರುತ್ತದೆ. ಮುಂದುವರಿದು ಕಾನೂನು ರೀತಿಯಲ್ಲಿ ಪ್ರಾಣಿ ಪಾರುಗಾಣಿಕಾ ಕೇಂದ್ರವನ್ನು ನಡೆಸುವಂತೆ ಹಾಗೂ ಪ್ರಾಣಿಪಕ್ಷಿಗಳ ಪುನರ್ವಸತಿಗಾಗಿ ವ್ಯವಸ್ಥಿತವಾಗಿ ಮತ್ತು ಅಹಿಂಸಾತ್ಮಕವಾಗಿ ನಿರ್ವಹಿಸುವಂತೆ ಸೂಚಿಸಿ ಸದ್ರಿ ಪಾರುಗಾಣಿಕಾ ಕೇಂದ್ರ ತೆರವುಗೊಳಿಸುವಂತೆ ನೋಟೀಸು ನೀಡಲಾಗಿರುತ್ತದೆ. ಆದರೆ ತಾವುಗಳು ಯಾವುದೇ ಸಮಂಜಸವಾದ ಪ್ರತ್ಯುತ್ತರ ಹೇಳಿಕೆಯಾಗಲೀ ಸಮರ್ಪಕವಾಗಿ ಪ್ರಾಣಿ ಸಾಕಾಣಿಕಾ ಕೇಂದ್ರವನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಈ ಸಂಬಂಧ ಮಾನ್ಯ ಉಪನಿರ್ದೇಶಕರು (ಆಡಳಿತ) ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಉಡುಪಿ ಇವರ ಆದೇಶದಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳ ಸಮನ್ವಯದೊಂದಿಗೆ ದಿನಾಂಕ: 12-02-2025ರಂದು ನೀವು ನಡೆಸುತ್ತಿರುವ ಪ್ರಾಣಿ ಪಾರುಗಾಣಿಕಾ ಕೇಂದ್ರದಲ್ಲಿ ಅಹಿಂಸಾತ್ಮಕವಾಗಿ ಮತ್ತು ಅವೈಜ್ಞಾನಿಕವಾಗಿ ಕೆಲವು ಪ್ರಾಣಿ ಪಕ್ಷಿಗಳನ್ನು ಬಂದಿಸಿ ಇರಿಸಲಾದ ಪ್ರಕರಣಕ್ಕೆ ಸಂಬಂದಿಸಿದಂತೆ ಸದ್ರಿ ಪಾರುಗಾಣಿಕಾ ಕೇಂದ್ರದಿಂದ ತೆರವುಗೊಳಿಸಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ನಿರ್ದೇಶನದಂತೆ ಸಂಬಂಧಪಟ್ಟ ಸ್ಥಳಕ್ಕೆ ಹಸ್ತಾಂತರಿಸಲಾಗಿರುತ್ತದೆ. ಹೀಗಿದ್ದರೂ ಕೂಡಾ ಪರವಾನಿಗೆ ಪಡೆದಿರುವುದಾಗಲೀ ಅಥವಾ ಪ್ರಾಣಿ ಪಾರುಗಾಣಿಕಾ ಕೇಂದ್ರವನ್ನು ಶಾಶ್ವತವಾಗಿ ನಿಲ್ಲಿಸಿರುವುದು ಕಂಡುಬಂದಿರುವುದಿಲ್ಲ. ಆದುದರಿಂದ ಕರ್ನಾಟಕ ಪುರಸಭೆ ಅಧಿನಿಯಮ 1964 ಕಲಂ 222, 251 ರಂತೆ ಈ ನೋಟೀಸು ತಲುಪಿದ 24ಗಂಟೆಯೊಳಗೆ ನೀವು ನಡೆಸುತ್ತಿರುವ ಪ್ರಾಣಿ ಪಾರುಗಾಣಿಕಾ ಕೇಂದ್ರವನ್ನು ಶಾಶ್ವತವಾಗಿ ತೆರವುಗೊಳಿಸುವಂತೆ ಸೂಚಿಸಿದೆ. ತಪ್ಪಿದ್ದಲ್ಲಿ ಸದ್ರಿ ಪಾರು ಗಾಣಿಕಾ ಕೇಂದ್ರವನ್ನು ಕಾನೂನು ರೀತ್ಯಾ ಶಾಶ್ವತವಾಗಿ ತೆರವುಗೊಳಿಸಿ ನಿರ್ಭಂದಿಸಲಾಗುವುದೆಂದು ಈ ಮೂಲಕ ಸೂಚಿಸಿದೆ.

ಇವರಿಗೆ,

ಶ್ರೀ ಬಿ.ಸುಧೀಂದ್ರ ಐತಾಳ್
ಬಿನ್ ಗಣಪತಿ ಐತಾಳ್
ಕೆರೆಕಟ್ಟೆ ಮನೆ, ಚಿತ್ರಪಾಡಿ ಗ್ರಾಮ
ಸಾಲಿಗ್ರಾಮ .

19/9/25
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ್ , ಸಾಲಿಗ್ರಾಮ
ಉಡುಪಿ ಜಿಲ್ಲೆ